ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು) :

ಅ), ಆ) ಮತ್ತು ಇ) ವಿಜಾಪುರ ತಾಲ್ಲೂಕಿನ ತಿಕೋಟಾದಲ್ಲಿ ಒಂದು 110 ಕೆ.ವಿ. ವಿದ್ಯುತ್ ಸ್ಟೇಷನ್ನನ್ನು ಸ್ಥಾಪಿಸುವ ಪ್ರಸ್ತಾವನೆಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ತಾಂತ್ರಿಕ ಸಮಿತಿಯು ದಿನಾಂಕ : 14–10–1999 ರಲ್ಲಿ ಅನುಮೋದನೆ ನೀಡಿರುತ್ತದೆ.

ಈ ವಿದ್ಯುತ್ ಸಬ್–ಸ್ಟೇಷನ್ ಕಾಮಗಾರಿಯನ್ನು ಈಗಾಗಲೇ "ಟರ್ನ್ ಕೀ" ಆಧಾರದ ಮೇಲೆ ದಿನಾಂಕ: 28–11–2002 ರಂದು ವಹಿಸಿಕೊಡಲಾಗಿದ್ದು, ವಿದ್ಯುತ್ ಸಬ್–ಸ್ಟೇಷನ್ನಿನ ಬಹುತೇಕ ಎಲ್ಲಾ ಕಾಮಗಾರಿಗಳು ಮುಗಿದಿದ್ದು, ಕೆಲವು ಮುಕ್ತಾಯದ ಹಂತದಲ್ಲಿರುತ್ತದೆ.

ಈ) ಸದರಿ ಸಬ್–ಸ್ಟೇಷನ್ನಿಗೆ ಸಂಬಂಧಪಟ್ಟಂತೆ ಮೊದಲು ಪ್ರಸರಣ ಮಾರ್ಗದ ಕಾಮಗಾರಿಯನ್ನು "ಟರ್ನ್ ಕೀ" ಆಧಾರದ ಮೇಲೆ ಬಿ.ಎಸ್.ಇ.ಎಸ್ ಗುತ್ತಿಗೆದಾರರಿಗೆ ವಹಿಸಲಾಗಿತ್ತು. ಆದರೆ ಸದರಿ ಗುತ್ತಿಗೆದಾರರು ಕಾಮಗಾರಿಯನ್ನು ಸಕಾಲದಲ್ಲಿ ಪ್ರಾರಂಭಿಸದೇ ಇದ್ದುದರಿಂದ ಅವರ ಗುತ್ತಿಗೆಯನ್ನು ರದ್ದುಗೊಳಿಸಿ ದೀಪಕ್ ಕೇಬಲ್ಸ್ ಗುತ್ತಿಗೆದಾರರಿಗೆ ದಿನಾಂಕ: 24–11–2002 ರಂದು ವಹಿಸಲಾಗಿದ್ದು ಕೆಲಸವು ಈಗ ಪ್ರಗತಿಯಲ್ಲಿದೆ.

ಉ) 110/11 ಕೆ.ವಿ. ಸಬ್ ಸ್ಟೇಷನ್ ಸ್ಥಾಪನೆಗಾಗಿ ಸಾಮಾನ್ಯವಾಗಿ ನಿಗದಿಪಡಿಸುವ ಕಾಲಮಿತಿಯು ಕಾರ್ಯನಿರ್ವಹಿಸಲು ನೀಡಲಾಗುವ ಆದೇಶದ ದಿನಾಂಕದಿಂದ 12 ತಿಂಗಳು

ಊ) ಸದರಿ ಸಬ್ ಸ್ಟೇಷನ್ನುಗಳ ಕಾಮಗಾರಿಯನ್ನು ಮಾರ್ಚ್–2004ರ ಅಂತ್ಯದೊಳಗೆ ಪೂರ್ಣಗೊಳಿಸಿ ಕಾರ್ಯಾರಂಭಗೊಳಿಸಲು ಉದ್ದೇಶಿಸಲಾಗಿದೆ.

ಉತ್ತರ ಕರ್ನಾಟಕದ ಹೈಕೋರ್ಟ್ ಪೀಠ ಸ್ಥಾಪನೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳು

58 (262) : ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮೇಗೌಡ (ತಿಕೋಟ) ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸಬೇಕೆಂದು ಬೇಡಿಕೆ ಸರ್ಕಾರದ ಮುಂದೆ ಇದ್ದು ಪೀಠ ಸ್ಥಾಪಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ;

ಆ) ಪೀಠ ಸ್ಥಾಪನೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಹೈಕೋರ್ಟ್ ಪೀಠ ಸ್ಥಾಪಿಸುವುದಕ್ಕೆ ಯಾವುದು ಸೂಕ್ತ ಸ್ಥಳವೆಂದು ಗುರುತಿಸಲಾಗಿದೆಯೇ;

ಈ) ಹಾಗಿದ್ದರೆ ಪೀಠ ಸ್ಥಾಪಿಸುತ್ತಿರುವುದನ್ನು ಏತಕ್ಕಾಗಿ ವಿಳಂಬ ಮಾಡಲಾಗುತ್ತಿದೆ;

ಉ) ಸರ್ಕಾರ ಪೀಠ ಸ್ಥಾಪಿಸುವುದಕ್ಕಾಗಿ ಹಾಕಿಕೊಂಡ ನಿರ್ದಿಷ್ಟವಾದ ಕಾಲ ಮಿತಿ ಏನು?

ಶ್ರೀ ಎಸ್.ಎಂ. ಕೃಷ್ಣ (ಮಾನ್ಯ ಮುಖ್ಯ ಮಂತ್ರಿಗಳು) :

ಅ) ಹೌದು.

ಆ) ಗೌರವಾನ್ವಿತ ಮುಖ್ಯ ನ್ಯಾಯಾಧೀಶರು ಹೈಕೋರ್ಟ್ ಪೀಠ ಸ್ಥಾಪಿಸಲು ಉತ್ತರ ಕರ್ನಾಟಕದ ಭಾಗದಲ್ಲಿ ಸ್ಥಳವನ್ನು ಆಯ್ಕೆ ಮಾಡಿದ ನಂತರ ಆ ಸ್ಥಳದಲ್ಲಿ ಎಲ್ಲಾ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಕೊಡಲು ಸರ್ಕಾರ ಬದ್ಧ ವಾಗಿದ್ದು ಇದಕ್ಕಾಗಿ 2003–04 ರ ಸಾಲಿನ ಆಯವ್ಯಯದಲ್ಲಿ ರೂ. 20.00 ಕೋಟಿಗಳ ಅನುದಾನವನ್ನು ಒದಗಿಸಿದೆ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಪೀಠ ಸ್ಥಾಪನೆಗೆ ಸ್ಥಳ ಆಯ್ಕೆ ಮಾಡುವ ವಿಷಯ ಗೌರವಾನ್ವಿತ ಮುಖ್ಯ ನ್ಯಾಯಾಧೀಶರ ಪರಿಶೀಲನೆಯಲ್ಲಿದ್ದು ಅದಕ್ಕಾಗಿ ಕಾಲಮಿತಿ ನಿರ್ದಿಷ್ಟಪಡಿಸಲಾಗಿಲ್ಲ.

ರಾಜ್ಯದ ಮುಖ್ಯಮಂತ್ರಿಗಳ ಜನಸ್ಪಂದನ ಕಾರ್ಯಕ್ರಮಗಳ ವಿವರವನ್ನು ಕುರಿತು

60 (264) : ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ) ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ಕಳೆದ 2003ರ ಅಕ್ಟೋಬರ್ ತಿಂಗಳ 8 ರಿಂದ 13ರವರೆಗೆ ಜನಸ್ಪಂದನ ಕಾರ್ಯಕ್ರಮ ಹಮ್ಮಿಕೊಂಡಿದ್ದು ಸರ್ಕಾರಕ್ಕೆ ಗೊತ್ತಿದೆಯೇ;

ಆ) ಜನಸ್ಪಂದನವನ್ನು ಯಾವ ಯಾವ ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು;

ಇ) ಜನಸ್ಪಂದನದಲ್ಲಿ ಜಿಲ್ಲಾವಾರು ಬಂದ ಅರ್ಜಿಗಳ ಸಂಖ್ಯೆ ಎಷ್ಟು;

ಈ) ಬಂದಿರುವ ಅರ್ಜಿಗಳನ್ನು ಸರ್ಕಾರ ಪರಿಶೀಲಿಸಿದ ನಂತರ ಅನರ್ಹಗೊಳಿಸಿರುವ ಅರ್ಜಿಗಳೆಷ್ಟು; ಅನರ್ಹಗೊಳಿಸಿರುವುದಕ್ಕೆ ಕಾರಣಗಳೇನು;

ಉ) ಪರೀಶೀಲನೆಯಿಂದ ಅರ್ಹಗೊಂಡ ಅರ್ಜಿಗಳಲ್ಲಿ ಸರ್ಕಾರದಿಂದ ಪರಿಹಾರ ನೀಡಿದ ಅರ್ಜಿಗಳೆಷ್ಟು; ಪರಿಹಾರ ನೀಡದೆ ಉಳಿದಿರುವ ಅರ್ಜಿಗಳೆಷ್ಟು (ಪರಿಹಾರ ನೀಡಿದ ಮತ್ತು ನೀಡದೇ ಇರುವ ಅರ್ಜಿಗಳ ಮಾಹಿತಿ ನೀಡುವುದು)

ಊ) ಪರಿಹಾರ ನೀಡದೇ ಬಾಕಿ ಉಳಿಸಿಕೊಂಡಿರುವುದಕ್ಕೆ ಕಾರಣಗಳೇನು; ಯಾವ ಕಾಲಮಿತಿಯೊಳಗಾಗಿ ಕಲ್ಪಿಸಿಕೊಡಲಾಗುವುದು;

ಋ) ಜನಸ್ಪಂದನ ಕಾರ್ಯಕ್ರಮಕ್ಕಾಗಿ ಮಾಡಲಾಗಿರುವ ಒಟ್ಟು ವೆಚ್ಚ ಎಷ್ಟು; ಇದನ್ನು ಯಾವ ಮೂಲದಿಂದ ಭರಿಸಲಾಗಿದೆ;

ೠ) ಜನಸ್ಪಂದನ ಕಾರ್ಯಕ್ರಮ ಹಮ್ಮಿಕೊಂಡಿದ್ದ ಉದ್ದೇಶವೇನು; ಉದ್ದೇಶ ಈಡೇರಿದೆಯೇ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ಹೌದು.

ಆ) ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ ತುಮಕೂರು, ಚಿತ್ರದುರ್ಗ, ದಾವಣಗೆರೆ, ಬಳ್ಳಾರಿ, ಕೊಪ್ಪಳ, ಬಾಗಲಕೋಟೆ ಹಾಗೂ ಬಿಜಾಪುರ ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು.

ಇ)

1.	ಬೆಂಗಳೂರು ನಗರ	96
2.	ಬೆಂಗಳೂರು ಗ್ರಾಮಾಂತರ	266
3.	ತುಮಕೂರು	1286
4.	ಚಿತ್ರದುರ್ಗ	1710
5.	ದಾವಣಗೆರೆ	647
6.	ಬಳ್ಳಾರಿ	1147
7.	ಕೊಪ್ಪಳ	2639
8.	ಬಾಗಲಕೋಟೆ	627
9.	ಬಿಜಾಪುರ	1105
	ಒಟ್ಟು	**9523**